

**ಅರುಣ್ ಜೋಳದಕೂಡ್ಲಿಗಿ**

ಕಲೆ: ಎಸ್. ವಿ. ಹೂಗಾರ್

# ನನ್ನೊಳಗೆ ಮುಗುಮ್ಮಾಗಿ ಕೂತು ಜಗಳ ಕಾಯುವ ಕ್ಯಾತ

ಸಾಹಿತ್ಯದ ಓದು ನಮ್ಮೊಳಗೆ ಒಂದು ಕಾಲ್ಪನಿಕ ಲೋಕವನ್ನು ಸೃಷ್ಟಿಸಿರುತ್ತದೆ. ಅವರವರ ಜೀವನಾನುಭವ ಮತ್ತು ಲೋಕದೃಷ್ಟಿಯನ್ನು ಆಧರಿಸಿ ಪ್ರತಿಯೊಬ್ಬರ ಒಳಗೂ ರೂಪುಗೊಂಡ ಆ ಲೋಕ ಭಿನ್ನವಾಗಿರುತ್ತದೆ. ಅದೇ ಸಾಹಿತ್ಯದ ಹೆಚ್ಚುಗಾರಿಕೆ. ಹಾಗಾಗಿ ಪ್ರತಿಯೊಬ್ಬರ ಕಣ್ಣೆದುರಿನ ಲೋಕದ ಜತೆ ಈ ಲೋಕ ಚೂರು ಫರಕಿನದು. ನನ್ನೊಳಗಿನ ಸಾಹಿತ್ಯದ ಓದಿನಿಂದ ರೂಪುಗೊಂಡ ಲೋಕದಲ್ಲಿ ಗಟ್ಟಿಯಾಗಿ ಕೂತು ಕಾಡುವ ಪಾತ್ರಗಳಲ್ಲಿ ಲಂಕೇಶರ 'ಅಕ್ಕ' ಕಾದಂಬರಿಯ 'ಕ್ಯಾತ'ನೂ ಒಬ್ಬ.

ಕ್ಯಾತ ಬಳ್ಳಾರಿಯ ಕಡೆಯಿಂದ ಬೆಂಗಳೂರಿಗೆ ವಲಸೆ ಬಂದ ಬಡ ಕುಟುಂಬದ ಸದಸ್ಯ. ತಂದೆಯ ಮುಖ ನೋಡುವ ಮೊದಲೇ ತಂದೆ ತೀರಿಕೊಂಡಿದ್ದ. ಅವ್ವ ಸತ್ತ ವರ್ಷ ಮಲ್ಲೇಶ್ವರದ ಹೂವಿನ ಅಂಗಡಿ ಕಿತ್ತು ಹಾಕಿದಾಗ ಹೊರಬಿದ್ದ ಅಕ್ಕ ತಮ್ಮ ಹೈಗ್ರೌಂಡ್ ಹತ್ತಿರ ತಲೆಯೆತ್ತಿದ ಐವತ್ತು ಗುಡಿಸಲುಗಳ ಪೈಕಿ ಒಂದು ಗುಡಿಸಲಲ್ಲಿ ಬದುಕತೊಡಗುತ್ತಾರೆ. ಈ ಗುಡಿಸಲು ಅಕ್ಕ ದೇವೀರಿ ಓಟು ಹಾಕಿ ಗೆಲ್ಲಿಸಿದ ಎಂಎಲ್‌ಎ ರಾಮಪ್ಪನಿಂದ ಸಿಕ್ಕಿದ್ದು. ಅದೂ ಸ್ವಂತದ್ದಲ್ಲ ಬಾಡಿಗೆಯದು. ಮೊದ ಮೊದಲು ದೇವೀರಿ ಇಟ್ಟಿಗೆ ಭಟ್ಟಿಗಳಲ್ಲಿ ಇಟ್ಟಿಗೆ ಹೊರುವ ಕೆಲಸಕ್ಕೆ ಹೋಗುವವಳು. ತಮ್ಮ ಕ್ಯಾತ ಓದಿ ದೊಡ್ಡವನಾಗಬೇಕೆಂದು ಕನಸು ಕಟ್ಟಿದವಳು. ಹುಡುಗಿ ಹೆಣ್ಣಾದಂತೆ ನಿಧಾನಕ್ಕೆ ತನ್ನ ಸುತ್ತಣ ಗಂಡುಗಳ ಕಾಮದ ಕಣ್ಣಿನ ದಾಳಿಗೆ ಸಿಕ್ಕು ಮೈಮಾರುವ ಹಂತಕ್ಕೆ ಬರುತ್ತಾಳೆ. ಭ್ರಮೆಗಳಲ್ಲಿ ಬದುಕುವುದನ್ನು ಅಭ್ಯಾಸ ಮಾಡಿಕೊಳ್ಳುತ್ತಾಳೆ. ತಮ್ಮನಾಗಿ ಕ್ಯಾತ ಒಳಗೊಳಗೆ ಕುದಿಯುವ, ವ್ಯವಸ್ಥೆಯ ಕ್ರೌರ್ಯಕ್ಕೆ ಅಕ್ಕ ಬಲಿಯಾಗುವುದನ್ನು ಸಹಿಸದೆ ಚಡಪಡಿಸುವ ಜೀವ. ಇದು ಎಲ್ಲ ಕಾಲದ ಪ್ರಾತಿನಿಧಿಕ ಜೀವ ಎಂದು ನನಗೆ ಅನಿಸುವುದಿದೆ.

ತಾನು ಹೇಳುವ ತನ್ನದೇ ಕಥೆಯಲ್ಲಿ ಕಲ್ಪನೆ ಸೇರಿಸಿದ್ರೆ ಸುಳ್ಳುಗಳು ನುಸುಳಿ ಬಿಡುತ್ವೆ ಎನ್ನುವ ಕ್ಯಾತನ ಪಾತ್ರ ಅನೇಕರ ಸಂಗತಿ ಹೇಳುತ್ತಾ ಹೇಳುತ್ತಾ ರೂಪುಗೊಳ್ಳುತ್ತದೆ. ಅಂದರೆ ಹಾಗೆ ಹೇಳುವಾಗಲೇ ನಮ್ಮೊಂದಿಗೆ ಆತ ಮಾತಿಗಿಳಿಯುತ್ತಾನೆ. ಅಕ್ಕ ದೇವೀರಿ ಬಗೆಗೆ ಕ್ಯಾತನಿಗೆ ಅತೀವ ಪ್ರೀತಿ, ಅಕ್ಕರೆ. ಆದರೆ, ಆಕೆಯ ನಡೆಗಳ ಬಗೆಗೆ ಅಷ್ಟೇ ಗುಮಾನಿ ಮತ್ತು ಸಿಟ್ಟು. ಕ್ಯಾತ ಸ್ವತಃ ತನ್ನ ಬದುಕಿನ ಕಥೆಯನ್ನು ನೆನಪಿಸಿಕೊಳ್ಳುತ್ತಾ, ನಾವು ಕಾಣದ ಅನೇಕ ಸೂಕ್ಷ್ಮಗಳನ್ನು ಪರಿಚಯಿಸುತ್ತಾ ಹೋಗುತ್ತಾನೆ. ತಾನು ಪರಿಚಯಿಸುವ ಸಮಾಜದ ಒಳಗೇ ಒಂದು ಪಾತ್ರವಾಗಿ ಎದುರಾಗಿ ಅಚ್ಚರಿ ಮೂಡಿಸುತ್ತಾನೆ. ಆತ ತನ್ನ ಮನದೊಳಗೆ ನಡೆಯುವ ತಾಕಲಾಟಗಳನ್ನು ಗುಟ್ಟಾಗಿಯೆಂಬಂತೆ ಓದುಗರಿಗೆ ಹೇಳುತ್ತಲೇ, ಸಂಗತಿಗಳನ್ನು ಪಿಸುಮಾತಿನ ಸ್ವಗತದಂತೆಯೂ, ಮನಸ್ಸಿನೊಳಗೆ ಘಟಿಸುವ ಬಂಡಾಯದಂತೆಯೂ ನಿರೂಪಿಸುತ್ತಾನೆ.

ತನ್ನ ಕಥೆ ಬರೆಯಲು ಶುರುಮಾಡುವ ಮುನ್ನ ದೊಡ್ಡ ದೊಡ್ಡ ಸಾಹಿತಿಗಳಾದ ವೆಂಕಟ್ರಾ, ಉಸಾ, ನರಸಿಂಹಯ್ಯ, ನೀಲಾದೇವಿಯಂಥವರ ರೆಫರೆನ್ಸ್ ಕೊಡುತ್ತಾ 'ನಾನು ಯಾವ ಸಾಹಿತಿಯೂ ಅಲ್ಲ